ಯಾವ ರೀತಿ ಪ್ರೊವೈಡ್ ಮಾಡಬೇಕು ಆ ರೀತಿ ನಾವು ಮಾಡುತ್ತೇವೆ. ಅದಕ್ಕಿಂತ ಜಾಸ್ತಿ ಹೇಳಲಿಕ್ಕೆ ಈಗ ಸಾಧ್ಯವಾಗುತ್ತಾ ಇಲ್ಲ.

ಕೋಲಾರದಲ್ಲಿ ವಿದ್ಯುತ್ ಕೇಂದ್ರದ ಸ್ಥಾಪನೆ

476 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರದಲ್ಲಿರುವ 220 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಯಾವಾಗ ಸ್ಥಾಪಿಸಲಾಯಿತು?*

ಆ) *ಈ ವಿದ್ಯುತ್ ಉಪ ಕೇಂದ್ರದಿಂದ ಸರಬರಾಜಾಗುತ್ತಿರುವ ಪ್ರದೇಶಗಳು ಹಾಗೂ ಈ ಉಪ ಕೇಂದ್ರದಲ್ಲಿ ಬೇಕಾಗಿರುವ ವಿದ್ಯುತ್ ಪರಿವರ್ತಕಗಳ ಸಂಖ್ಯೆ ಎಷ್ಟು?*

ಇ) *ಬೇಕಾಗಿರುವಷ್ಟು ವಿದ್ಯುತ್ ಉಪಕೇಂದ್ರಗಳನ್ನು ಇನ್ನೂ ಹಾಕದಿರುವ ಸಂಗತಿಯು ನಿಜವೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಆಗಸ್ಟ್ 1989ರಿಂದ.

ಆ) ಈ ವಿದ್ಯುತ್ ಉಪ-ಕೇಂದ್ರದ ಕೋಲಾರ, ಶ್ರೀನಿವಾಸಪುರ, ಮುಳಬಾಗಿಲು ಮತ್ತು ಮಾಲೂರು ತಾಲ್ಲೂಕುಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರದಲ್ಲಿ 2×100 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸಲು ಉದ್ದೇಶಿಸಿದ್ದು, ಇದರ ಪೈಕಿ ಒಂದು ಈಗ ಕೆಲಸ ನಿರ್ವಹಿಸುತ್ತಿದೆ. ಇನ್ನೊಂದು ಪರಿವರ್ತಕವನ್ನು ಅಳವಡಿಸಬೇಕಾಗಿದೆ.

ಅಲ್ಲದೆ, ಈ ವಿದ್ಯುತ್ ಉಪಕೇಂದ್ರದಲ್ಲಿ 2 x 5 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ.

ಇ) ಹೌದು. ಕೋಲಾರ ಜಿಲ್ಲೆಯಲ್ಲಿ ಬೇಕಾಗಿರುವ ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಹಂತ ಹಂತವಾಗಿ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು.

ಶ್ರೀ ಸಿ. ಬೈರೇಗೌಡ: ಸನ್ಮಾನ್ಯ ಅಧ್ಯಕ್ಷರೇ 2 x 100 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಅನ್ನು ಅಲ್ಲಿ ಹಾಕುವುದಕ್ಕೆ ಬದಲಾಗಿ ಒಂದೇ ಒಂದು ಹಾಕಿರತಕ್ಕಂಥಾದ್ದು. ಈಗ ಉಳಿದಿರತಕ್ಕಂಥ ಮತ್ತೊಂದನ್ನು ಯಾವಾಗ ಅಲ್ಲಿ ಹಾಕುತ್ತೀರಿ ಮತ್ತೆ 2 x 500 ಎಂ.ವಿ.ಎ. ತಾವು ಅಳವಡಿಸಲಾಗುತ್ತಿದೆಯೆಂದು ಹೇಳುತ್ತೀರಿ. ಅಲ್ಲಿಗೆ ಬೇಕಾಗಿರತಕ್ಕಂಥದ್ದು 2 x 5 ಎಂ.ವಿ.ಎ. ಅಲ್ಲ, ಇದು 20 ಎಂ.ವಿ.ಎ. ಬೇಕಾಗಿರತಕ್ಕಂಥದ್ದು. ಇದನ್ನು ಯಾವಾಗ ಹಾಕುತ್ತೀರಿ ಮತ್ತೆ ಅವಶ್ಯಕತೆ ಹಾಗೂ ಬೇರೆ ಬೇರೆ ಸಬ್‌ಸ್ಟೇಷನ್ಸ್ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು ಎಂದು ಹೇಳಿದ್ದೀರಿ. ಇದನ್ನು ಯಾವಾಗ ಸ್ಥಾಪನೆ ಮಾಡುತ್ತೀರಿ? ಮತ್ತು ವೇಮಗಲ್‌ನಲ್ಲಿ ಒಂದು ಸಬ್‌ಸ್ಟೇಷನ್ ಈಗಿರತಕ್ಕಂತಹ ಕೆಪಾಸಿಟಿ ಏನು ಇದೆ, ಅದು ಎಕ್ಸಾಸ್ಟ್ ಆಗಿದೆ, ಓವರ್ ಲೋಡ್ ಆಗುತ್ತಾ ಇದೆ. ಅದಕ್ಕೆ ಅಡಿಷನಲ್ ಟ್ರಾನ್ಸ್‌ಫಾರ್ಮರನ್ನು ಯಾವಾಗ ಹಾಕುತ್ತೀರಿ? ಮತ್ತು ಡೀಸೆಲ್ ಜನರೇಟಿಂಗ್ ಸ್ಟೇಷನ್ ಅನ್ನು ಕೋಲಾರದಲ್ಲಿ ಹಾಕಬೇಕಾಗಿತ್ತು. ಕೋಲಾರದಲ್ಲಿ ಅದನ್ನು ಯಾವಾಗ ಹಾಕುತ್ತೀರಿ?

ಶ್ರೀ ಎಸ್. ಬಂಗಾರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಡೀಸೆಲ್ ಸ್ಟೇಷನ್ ವಿಚಾರ ಒಂದೇ ಅಲ್ಲ. ಅದರ ಜೊತೆಗೆ ಇನ್ನೂ ಕೂಡ 3- 4 ಕರ್ನಾಟಕ ರಾಜ್ಯದಲ್ಲಿದೆ ಎಂಬ ಬಗ್ಗೆ ನಾವು ಈಗಾಗಲೇ ಉತ್ತರ ಕೊಟ್ಟಿದ್ದೇವೆ. ಅದು ಈ ಸದನದಲ್ಲೂ

ಕೂಡ ಪ್ರಸ್ತಾಪಕ್ಕೆ ಬಂದಿದೆ. ಈ ಬಗ್ಗೆ ತಮಗೆ ಹೇಳಬೇಕಾದರೆ ನಿಮಗೆ ಗೊತ್ತಿರುವ ಹಾಗೆ ಮೊನ್ನೆ ಮೊನ್ನೆ ನಾವು ನೀವು ಮಾತನಾಡಿದ್ದೇವೆ. ತಾವು ಒಂದು ಡೆಲಿಗೇಷನ್ ತೆಗೆದುಕೊಂಡು ಬಂದಾಗಲೂ ಸಹ ಎಲ್ಲಾ ವಿಚಾರಗಳನ್ನು ಹೇಳಿದ್ದೇವೆ. ಆಮೇಲೆ ಕೆಲವು ಕಾರ್ಯಕ್ರಮ ಕೂಡ ಹಾಕಿದ್ದೇವೆ. ಇನ್ನು ಉಳಿದಿರತಕ್ಕಂಥದ್ದು ನಾವು ಕೂಡಲೇ ಎನ್.ಜಿ.ಇ.ಎಫ್.ನಿಂದ ತರಿಸಿಕೊಂಡು ಅಳವಡಿಸಬೇಕು ಅನ್ನುವಂತಹದ್ದು ಮುಖ್ಯವಾಗಿರತಕ್ಕಂಥ ಒತ್ತಡ ಇದೆ. ಏತಕ್ಕೆಂದರೆ ಬರಗಾಲದಲ್ಲಿ ಬೋರ್‌ವೆಲ್‌ಗಳಿಗೆ ನಾವು ಆ ರೀತಿಯಿಂದ ಡ್ರಾಪ್ ಆಗದಹಾಗೆ ಸರಿಯಾಗಿ ವಿದ್ಯುತ್ ಕೊಡಬೇಕೆಂದರೆ ಇದು ಆಗಲೇ ಬೇಕಾಗುತ್ತದೆ. ಅದರ ಬಗ್ಗೆ ನಾವು ಈಗಾಗಲೇ ಕೆ.ಇ.ಬಿ.ಯ ಛೇರ್‌ಮನ್‌ರವರಲ್ಲಿ ಮಾತನಾಡಿ ಎನ್.ಜಿ.ಯ.ಇ.ಎಫ್.ಗೆ ಕೂಡ ಈಗಾಗಲೇ ವಿಚಾರ ತಿಳಿಸಿ ಕೂಡಲೇ ಕಾರ್ಯಕ್ರಮ ಹಾಕುತ್ತೇವೆ. ಸದ್ಯದಲ್ಲೇ ಅದನ್ನು ಕೂಡ ನಾವು ಒದಗಿಸಿಕೊಡುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. 1990-91ರ ಬಜೆಟ್‌ನಲ್ಲಿ ಕೂಡ 150 ಲಕ್ಷವನ್ನು ಇದಕ್ಕೆ ನಾವು ಇಟ್ಟಿದ್ದೇವೆ. ಮಾರ್ಚ್ ಎಂಡ್‌ವರೆಗೂ ಖರ್ಚು ಮಾಡುವುದಕ್ಕಾಗಿ ಅಂದರೆ ತೊಂದರೆಯಾಗಬಾರದು ಅನ್ನುವ ದೃಷ್ಟಿಯಿಂದ ನಾವು ಹಣವನ್ನು ಕೂಡ ಇಟ್ಟಿದ್ದೇವೆ. 2 x 100, 220 ಕೆ.ವಿ. ಸ್ಟೇಷನ್ ಕೋಲಾರದಲ್ಲಿ ಏನಿದೆ, ಅದು towns of Kolar, Srinivasapur, Mulbagal and Malur. ಈ ಸ್ಥಳಗಳಿಗೆ ಸರ್ವ್ ಮಾಡುತ್ತಿದೆ. ಉಳಿದಿರತಕ್ಕಂಥದನ್ನು ನಾವು ಒದಗಿಸಿಕೊಡುತ್ತಿದ್ದೇವೆ. ಇದೇ ಪ್ರಶ್ನೆ ಹಿಂದೆ ಬಂದಿದ್ದಾಗ ನಾವು ಉತ್ತರ ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ ನಾನು ಸ್ಪೆಸಿಫಿಕ್ ಆಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅತಕ್ಕೆ ಸ್ಪೆಸಿಫಿಕ್ ಆಗಿ ಉತ್ತರವನ್ನು ದಯವಿಟ್ಟು ಅವರು ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಏನೆಂದರೆ ಇಲ್ಲಿ, ಇನ್ನೊಂದು ಪರಿವರ್ತಕವನ್ನು ಅಳವಡಿಸಬೇಕಾಗಿದೆ ಎಂದು ಹೇಳಿದ್ದೀರಿ. ಅಂದರೆ 100 ಎಂ.ವಿ. ಕೆಪಾಸಿಟಿ ಟ್ರಾನ್ಸ್‌ಫಾರ್ಮರನ್ನು ಮತ್ತೊಂದು ಹಾಕಬೇಕಾಗುತ್ತದೆಂದು ತಾವು ಒಪ್ಪುತ್ತಿದ್ದೀರಿ. ಅದನ್ನು ಯಾವಾಗ ಹಾಕುತ್ತೀರಿ? ಆಮೇಲೆ 2×5 ಎಂ.ವಿ.ಎ. ಅಳವಡಿಸಲಾಗುತ್ತದೆಂದು ಹೇಳುತ್ತಿದ್ದೀರಿ. ಅಲ್ಲಿ ರಿಕ್ವಯರ್‌ಮೆಂಟ್ ಇರತಕ್ಕಂಥದ್ದು 2×5 ಎಂ.ವಿ.ಎ. ಅಲ್ಲ. 20 ಎಂ.ವಿ.ಎ. ಬೇಕು. ಈ ಟ್ರಾನ್ಸ್‌ಫಾರಮ್‌ನ್ನು ಯಾವಾಗ ಹಾಕುತ್ತೀರಿ. ಮತ್ತೆ ಬೇಕಾಗಿರುವಷ್ಟು ವಿದ್ಯುತ್ ಉಪಕೇಂದ್ರಗಳನ್ನು ಇನ್ನು ಹಾಕದಿರುವುದು ನಿಜವೇ ಎನ್ನುವುದಕ್ಕೆ ಹೌದು ಎಂದು ತಾವು ಒಪ್ಪಿಕೊಂಡಿದ್ದೀರಿ. ಈಗ ಹೊಸದಾಗಿ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರತಕ್ಕಂಥ ಉಪ ಕೇಂದ್ರಗಳು ಯಾವುವು? ಅದರಲ್ಲಿ ವೇಮಗಲ್‌ನಲ್ಲಿ ಒಂದನ್ನು ಈಗಾಗಲೇ ಸ್ಥಾಪಿಸಲಾಗಿದೆ. ಅಲ್ಲಿರತಕ್ಕಂಥ ಟ್ರಾನ್ಸ್‌ಫರ್ಮರ್ ಕೃಪಾಸಿಟಿ ಎಕ್ಸೀಡ್ ಆಗಿದೆ, ಓವರ್ ಲೋಡ್ ಆಗುತ್ತಿದೆ. ಅಲ್ಲಿ ಅಡಿಷನಲ್ ಟ್ರಾನ್ಸ್‌ಫಾರ್ಮ್ ಬೇಕಾಗಿದೆ. ಅದನ್ನು ಯಾವಾಗ ಹಾಕುತ್ತೀರಿ.

ಶ್ರೀ ಎಸ್. ಬಂಗಾರಪ್ಪ: ಎರಡು ಟ್ರಾನ್ಸ್‌ಫಾರ್ಮರ್ಸ್ of 5 MVA capacity are also being installed for improving the power supply to ಕೋಲಾರ, ಶ್ರೀನಿವಾಸಪುರ ಮತ್ತು ಮುಳಬಾಗಿಲು ಎಲ್ಲೆಲ್ಲಿ ಸಬ್‌ಸ್ಟೇಷನ್ ಬೇಕು ಎಂದು ಏನು ತಾವು ಕೇಳಿದ್ದೀರಿ, ಆ ಬಗ್ಗೆ ಹೇಳಬೇಕೆಂದರೆ ಬಂಗಾರಪೇಟೆ ವರ್ಕ್ಸ್ ಪ್ರೊಗ್ರೇಸ್ಸಿವ್ ಆಗಿ ನಡೆಯುತ್ತಿದೆ. ಬಂಗಾರಪೇಟೆ 2x8 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ at an estimated cost of Rs.167.74 lakhs ಒಂದು ಎರಡನೆಯದು ಮುಳಬಾಗಿಲಿನಲ್ಲಿ 2x6.3 ಎಂವಿಎ at an estimated cost of Rs. 38.52 lakhs; at Srinivaspur, 2 x 12.5 MVA at an estimated cost of Rs. 107 lakhs. These are all the works under progress.ಈಗ ನಡೆಯುತ್ತಿರತಕ್ಕಂಥದ್ದು. ನಮ್ಮಲ್ಲಿ 66.11 ಕೆ.ವಿ. sub-stations in the following places will be established. ಮತ್ತೆ ಮುಂದಿನ ತಮ್ಮ ಪ್ರಶ್ನೆಗೆ ಉತ್ತರ

ಇಲ್ಲೇ ಸಿಕ್ಕುತ್ತಿದೆ. ಅದು ಎಲ್ಲಿ ಅಂದರೆ, ದಿಬ್ಬೂರ್ ಹಳ್ಳಿ 1x6.3 ಎಂವಿಎ, ಅದು 40 ಲಕ್ಷ ರೂಪಾಯಿ ಖರ್ಚಿನಲ್ಲಿ ಮಾಡತಕ್ಕಂಥದ್ದು. ದೊಮ್ಮಸಂದ್ರ ಅದು 1x6.3 ಎಂವಿಎ at an estimated cost of Rs. 40 lakhs at Sidlaghatta- 2x8 MVA, estimated cost of Rs. 90 lakhs. ತಳದ್ವಾರ 1x6.3 ಎಂ.ವಿ.ಎ. 30 ಲಕ್ಷ ರೂಪಾಯಿನದ್ದು. ಇಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ನಾವು ಈಗ ಪ್ರೋಗ್ರೆಸ್‌ನಲ್ಲಿರತಕ್ಕಂಥದ್ದನ್ನು ನಾವು ಮುಗಿಸಿಕೊಡುತ್ತೇವೆ. ಉಳಿದಿರತಕ್ಕಂಥದ್ದನ್ನು ತೆಗೆದುಕೊಳ್ಳುತ್ತೇವೆ. ಇದಾದ ಮೇಲೆ ನಿಮ್ಮ ಕೋಲಾರ ಜಿಲ್ಲಿಗೆ ಏನೂ ತೊಂದರೆ ಇರುವುದಿಲ್ಲ ಇದರ ಮಧ್ಯೆ ಎನ್.ಜಿ.ಇ.ಎಫ್.ದೂ ಕೂಡ ಸದ್ಯದಲ್ಲೇ ಕಳುಹಿಸಿಕೊಡತಕ್ಕಂಥ ಏರ್ಪಾಡು ಮಾಡಿದ್ದೇವೆ. ಇದಕ್ಕೆಲ್ಲ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಎ. ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾಲೂರು ತಾಲ್ಲೂಕ್ ಲಕ್ಕೂರಿನಲ್ಲಿ ಒಂದು ಎಂ.ಇ.ಎಸ್. ಸ್ಟೇಷನ್ ಮಾಡುವಂಥ ಪ್ರಸ್ತಾವ ಸರ್ಕಾರದ ಮುಂದಿದೆ. ಅದಕ್ಕೆ ಮಂಜೂರಾತಿ ನೀಡಿ ಆ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ವಿವರಗಳನ್ನು ಬೇಕಾದರೆ ತಮಗೆ ಒದಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ ಚುಕ್ಕೆ ಪ್ರಶ್ನೆ 232 (1115) ಕಾಲಾವಕಾಶ ಕೇಳಿ ಪತ್ರ ಬರೆದಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ಮುಖ್ಯವಾದ ಪ್ರಶ್ನೆ. ಸದನ ಮುಗಿಯುವುದರೊಳಗಾಗಿ ಅಂದರೆ 22ನೇ ತಾರೀಖಿನ ಒಳಗೆ ನಮಗೆ ಅನುಮತಿ ಕೊಡಬೇಕು, ಆಗಬಹುದೆ?

ಶ್ರೀ ಎಸ್. ಬಂಗಾರಪ್ಪ: ಸಾಧ್ಯವಾದರೆ ನಾವು ಒದಗಿಸಿಕೊಡುತ್ತೇವೆ.

ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು

1058 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿನ ಎಷ್ಟು ರೈತರ ಪಂಪ್‌ಸೆಟ್ಟುಗಳಿಗೆ ಈವರೆಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ? (ಜಿಲ್ಲಾವಾರು ವಿವರಗಳನ್ನೊದಗಿಸುವುದು)

ಆ) ಪ್ರತಿ ಜಿಲ್ಲೆಯಲ್ಲಿ ಎಷ್ಟು ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಗುರಿಯನ್ನು ಹೊಂದಲಾಗಿದೆ?

ಇ) ಜನತಾ ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಯೋಜನೆಯನ್ನೇನಾದರೂ ಹಾಕಿಕೊಳ್ಳಲಾಗಿದೆಯೇ?

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) 1990-91ನೇ ಸಾಲಿನಲ್ಲಿ ಫೆಬ್ರವರಿ 1991ರ ಅಂತ್ಯದವರೆಗೆ 48,617 ನೀರಾವರಿ ಪಂಪುಸೆಟ್‌ಗಳನ್ನು ವಿದ್ಯುದ್ದೀಕರಿಸಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಪ್ರತಿ ಜಿಲ್ಲೆಗೆ ನಿಗದಿಪಡಿಸಿರುವ ಗುರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.